

‘ಕಾಫಿ ತೋಟ’ ಮೂಲಕ ಟಿ.ಎನ್. ಸೀತಾರಾಮ್ ಕನ್ನಡ ಚಿತ್ರರಂಗಕ್ಕೆ ಮರಳಿದ್ದಾರೆ. ಈ ಸಿನಿಮಾದ ಮೂಲಕ ಮನರಂಜನೆಯ ಹೊಸ ಸಮೀಕರಣವೊಂದನ್ನು ಅವರು ರೂಪಿಸಲು ಪ್ರಯತ್ನಿಸಿದಂತಿದೆ.

■ ರಘು

# ಟಿಎನ್ನೆಸ್ ‘ಕಾಫಿ’ ಸಮೀಕರಣ!

‘ಕಾಫಿ ತೋಟ’ ತೆರೆಗೆ ಸಿದ್ಧವಾಗಿದೆ. ನಿರ್ದೇಶಕ ಟಿ.ಎನ್. ಸೀತಾರಾಮ್ ಬಹು ದಿನಗಳ ನಂತರ ಜನತಾ ನ್ಯಾಯಾಲಯದಲ್ಲಿ ತಮ್ಮ ಸಿನಿಮಾದೊಂದಿಗೆ ನಿಂತಿದ್ದಾರೆ. ಅವರ ನೆಚ್ಚಿನ ಕರಿಕೋಟು ಈ ಚಿತ್ರದಲ್ಲೂ ಇದೆ. ‘ಇದೊಂದು ಅಪ್ಪಟ ಮನರಂಜನೆಯ ಪ್ರಯತ್ನ’ ಎನ್ನುವುದು ಪ್ರೇಕ್ಷಕರಿಗೆ ಅವರು ನೀಡುವ ಅಭಯ!

ಸೀತಾರಾಮ್ ಅವರಿಗೆ ಸಿನಿಮಾ ಹೊಸತೇನಲ್ಲ. ಎಸ್.ಎಲ್. ಭೈರಪ್ಪನವರ ‘ಮತದಾನ’ ಕಾದಂಬರಿಯನ್ನು ಅದೇ ಹೆಸರಿನಲ್ಲಿ ಸಿನಿಮಾ ಮಾಡಿದ್ದರು. ನಂತರದಲ್ಲಿ ‘ಮೀರಾ ಮಾಧವ ರಾಘವ’ ಎನ್ನುವ ಸಿನಿಮಾ ನಿರ್ದೇಶಿಸಿದ್ದರು. ಚೊಚ್ಚಿಲ ಸಿನಿಮಾ ನಿರ್ದೇಶಕರ ಬಗ್ಗೆ ನಿರೀಕ್ಷೆಗಳನ್ನು ಹುಟ್ಟಿಸಿದರೆ, ಎರಡನೆಯದು ಸ್ವತಃ ಟಿಎನ್ನೆಎಸ್ ಅವರಿಗೇ ನಿರಾಶೆ ಹುಟ್ಟಿಸಿದ ಸಿನಿಮಾ. ಆ ಸೋಲಿನ ಆತ್ಮವಿಮರ್ಶೆಯ ರೂಪದಲ್ಲಿ ಚಿತ್ರರಂಗದಿಂದ ದೂರವುಳಿದಿದ್ದ ಅವರು, ಮತ್ತೆ ಕಿರುತೆರೆಯಲ್ಲಿ ತೊಡಗಿಕೊಂಡಿದ್ದರು. ಸದ್ಯಕ್ಕೆ ಕಿರುತೆರೆ ಧಾರಾವಾಹಿಗಳಿಂದ ಕಳಚಿಕೊಂಡಂತೆ ಕಾಣಿಸುವ ಅವರು ‘ಕಾಫಿತೋಟ’ ರೂಪಿಸಿದ್ದಾರೆ.



ಟಿಎನ್ನೆಸ್ ಸಿನಿಮಾ ಕನ್ನಡತನ ಹಾಗೂ ಸದಭಿರುಚಿ – ಎರಡು ಕಾರಣಗಳಿಂದಲೂ ಗಮನಸೆಳೆದಿದೆ. ‘ಕಾಫಿ ತೋಟ’ ಎನ್ನುವ ಶೀರ್ಷಿಕೆಯಲ್ಲೇ ಕಾಫಿಯ ಘಮಲೂ ಕನ್ನಡದ ಸೊಗಡೂ ಸೇರಿಕೊಂಡಿದೆ. ಇನ್ನು ಚಿತ್ರದ ಹಾಡುಗಳು ಕೂಡ ನವಿರಾಗಿಯೂ ಮಧುರವಾಗಿಯೂ ಇವೆ.

‘ಕಾಫಿ ತೋಟ’ ಥ್ರಿಲ್ಲರ್ ಕಥನದ ಸಿನಿಮಾ. ನ್ಯಾಯಾಲಯದ ದೃಶ್ಯಗಳು ಈ ಸಿನಿಮಾದ ಆಕರ್ಷಣೆಯಲ್ಲಿ ಸೇರಿವೆ. ಪ್ರೇಕ್ಷಕರಿಗೆ ಎಲ್ಲೂ ಬೋರ್ ಹೊಡೆಸದಂತೆ ಸಿನಿಮಾ ರೂಪಿಸಿದ್ದೇನೆ ಎನ್ನುವ ನಿರ್ದೇಶಕರ ಮಾತಿನಲ್ಲಿ ಎಲ್ಲ ವರ್ಗದ ಪ್ರೇಕ್ಷಕರನ್ನು ತಲುಪುವ ಉದ್ದೇಶ ಇರುವಂತಿದೆ.

ಕಳೆದ ಎರಡು ಮೂರು ವರ್ಷಗಳಿಂದ ಸಿನಿಮಾ ಮತ್ತು ಕಿರುತೆರೆಯಿಂದ ಸಮಾನ ಅಂತರ ಕಾಪಾಡಿಕೊಂಡಂತಿದ್ದ ಸೀತಾರಾಮ್, ಇದ್ದಕ್ಕಿದ್ದಂತೆ ಸಿನಿಮಾದಲ್ಲಿ ಆಸಕ್ತಿ ವಹಿಸಿದ ಹಿನ್ನೆಲೆಯಲ್ಲೊಂದು ಪ್ರೇರಣೆಯಿದೆ. ಅದು ಕನ್ನಡ ಚಿತ್ರರಂಗದಲ್ಲಿ ಪ್ರಸ್ತುತ ಕಾಣಿಸುತ್ತಿರುವ ಪ್ರತಿಭಾವಂತ ಯುವ ನಿರ್ದೇಶಕರ ಫಸಲು. ‘ಗೋಧಿ ಬಣ್ಣ’ದ ಹೇಮಂತ್, ‘ರಾಮಾ ರಾಮಾ ರೇ’ ಚಿತ್ರದ ಸತ್ಯಪ್ರಕಾಶ್, ‘ತಿಥಿ’ಯ ರಾಮ್ ರೆಡ್ಡಿ – ಇವರೆಲ್ಲ ಸೀತಾರಾಮ್ ಅವರ ಪಾಲಿಗೆ ಸ್ಫೂರ್ತಿಯ ಸೆಲೆಗಳಾಗಿದ್ದಾರೆ.

ಸಾಮಾನ್ಯವಾಗಿ ಹಿರಿಯರಿಂದ ಕಿರಿಯರು ಸ್ಫೂರ್ತಿ ಪಡೆಯುವುದು ರೂಢಿ. ಆದರೆ, ಸೀತಾರಾಮ್ ತನ್ನ ಮಕ್ಕಳ ವಯಸ್ಸಿನ ಕಿರಿಯರಿಂದ ಪ್ರೇರಣೆ ಪಡೆದಿರುವುದಾಗಿ ಹೇಳುತ್ತಿರುವುದು ವಿಶೇಷವಾಗಿದೆ. ಇಂಥ ವಿನಯ ಚಿತ್ರರಂಗದಲ್ಲಿ ಅಪರೂಪ.

ಸಾಮಾಜಿಕ ಜಾಲತಾಣದ ಮೂಲಕವೇ ತಮ್ಮ ಸಿನಿಮಾಕ್ಕೆ ನಿರ್ಮಾಪಕರ ಬಳಗವೊಂದನ್ನು ಟಿಎನ್ನೆಸ್ ರೂಪಿಸಿಕೊಂಡಿದ್ದಾರೆ. ಅವರು ಕಲೆಹಾಕಿರುವ ತಾರಾಗಣ ಕೂಡ ವಿಭಿನ್ನ ಸಮೀಕರಣದಿಂದ ಕೂಡಿದೆ. ‘ರಂಗಿತರಂಗ’ದ ಮೂಲಕ ಜನಪ್ರಿಯತೆ ಗಳಿಸಿದ ರಾಧಿಕಾ ಚೇತನ್ ಚಿತ್ರದ ಮುಖ್ಯ ಪಾತ್ರದಲ್ಲಿ ನಟಿಸಿದ್ದಾರೆ. ಚಿತ್ರದಲ್ಲವರು ‘ಕಾಫಿ ತೋಟ’ದ ಒಡತಿ. ಸಿನಿಮಾದಲ್ಲಿ ಕೋರ್ಟ್ ಇದೆ ಎಂದಮೇಲೆ ಸೀತಾರಾಮ್ ಕೂಡ ನಟಿಸಿದ್ದಾರೆ ಎಂದೇ ಅರ್ಥ. ಉಳಿದಂತೆ ರಘು ಮುಖರ್ಜಿ, ಸುಧಾ ಬೆಳವಾಡಿ, ಸಂಯುಕ್ತಾ, ಸುಂದರ್ ರಾಜ್ ಹಾಗೂ ವೀಣಾ ಸುಂದರ್ ತಾರಾಗಣದಲ್ಲಿರುವ ಪ್ರಮುಖರು.

ಚಿಕ್ಕಮಗಳೂರಿನ ಚೆಲುವಿನ ಜೊತೆಗೆ ವಾರಾಣಸಿಯ ಸಂಕೀರ್ಣತೆಯನ್ನೂ ‘ಕಾಫಿ ತೋಟ’ದಲ್ಲಿ ಕಾಣಬಹುದು. ಅಶೋಕ್ ಕಶ್ಯಪ್ ಛಾಯಾಗ್ರಹಣ ಹಾಗೂ ಮಿಥುನ್ ಮುಕುಂದನ್ ಸಂಗೀತ ಚಿತ್ರಕ್ಕಿದೆ. ಆಗಸ್ಟ್ 18ರಂದು ‘ಕಾಫಿ ತೋಟ’ ತೆರೆ ಕಾಣುತ್ತಿದೆ.